

# ಜೋಗದ ಸಿರಿ ಬೆಳಕಿನಲ್ಲಿ..

**ದೇಶದ ಎರಡನೇ ಅತಿದೊಡ್ಡ ಜಲಪಾತ ಜೋಗ. ಪ್ರವಾಸಿಗರನ್ನು ಸೆಳೆಯುವ ಹಲವು ಸೌಲಭ್ಯಗಳು ಇಲ್ಲಿವೆಯಾದರೂ, ಇದನ್ನು ವಿಶ್ವದರ್ಜೆಗೆ ಏರಿಸಲು ಇನ್ನಷ್ಟು ಪ್ರಯತ್ನ ಮಾಡಬೇಕಿದೆ.**

**■ ಚಂದ್ರಹಾಸ ಹಿರೇಮಳಲಿ**

**ಚಿತ್ರಗಳು: ಕೇಶವ ವಿಟ್ಲ**

*ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ..*
*ಸಾಯೋದ್ರೊಳಗೆ ಒಮ್ಮೆ ನೋಡು ಜೋಗದ್ ಗುಂಡಿ..!*

– ಈ ಹಾಡನ್ನು ಬರೆದ ಮೂಗೂರು ಮಲ್ಲಪ್ಪ ಅವರ ಹೆಸರು ಮರೆತೇಹೋಗಿದೆ. ಆದರೆ 'ಜೀವನ ಚೈತ್ರ' ಸಿನಿಮಾದಲ್ಲಿ ಡಾ.ರಾಜ್‌ಕುಮಾರ್ ಅವರು ಹಾಡಿದ ಈ ಹಾಡು, ಜೋಗ ಜಲಪಾತದ ಸೊಬಗು ನೋಡದೇ ಹೋದರೆ ಜೀವನ ನಿರರ್ಥಕ ಎನ್ನುವ ಸಂದೇಶವನ್ನು ಸಾರುತ್ತದೆ.

ಹಲವು ಅಣೆಕಟ್ಟೆಗಳ ದಿಗ್ಬಂಧನಗಳನ್ನು ದಾಟಿ ಮೈದುಂಬಿ ಹರಿದು ಬರುವ ಶರಾವತಿ ನಿತ್ಯ ಹರಿದ್ವರ್ಣದ ದಟ್ಟ ಕಾನದ ನಡುವೆ ಬಳುಕುತ್ತಾ, ಬೃಹತ್ ಬಂಡೆಗಳ ಕೊರಳ ವೈಯಾರದಿ ಸುತ್ತುಹಾಕುತ್ತಾ 960 ಅಡಿ ಎತ್ತರದಿಂದ ಧುಮ್ಮಿಕ್ಕುತ್ತಾಳೆ. ಶರಾವತಿ ನದಿ ಭಾರಿ ಬಂಡೆಗಳ ಕೊರಳ ಸುತ್ತುವಾಗ ನಾಲ್ಕು ಕವಲುಗಳಾಗಿ ಧುಮ್ಮಿಕ್ಕುವ ಈ ತಾಣವೇ ವಿಶ್ವ ಪ್ರಸಿದ್ಧ ಜೋಗ ಜಲಪಾತ.

ಶಿವಮೊಗ್ಗ– ಉತ್ತರ ಕನ್ನಡ ಜಿಲ್ಲೆಗಳ ಗಡಿ ಭಾಗದಲ್ಲಿರುವ ಈ ಜಲಪಾತದ ಸೊಬಗು ನೋಡಲು ಎರಡು ಕಣ್ಣುಗಳು ಸಾಲದು. ನಾಲ್ಕು ಕವಲುಗಳೂ ಒಂದಕ್ಕಿಂತ ಒಂದು ಭಿನ್ನ. ಗಂಭೀರ ವದನ ರಾಜ, ಆರ್ಭಟಿಸುವ ರೋರರ್, ಬಂಡೆಗಳಿಗೆ ತಾಕಿಕೊಂಡೇ ಚಿಮ್ಮುವ ರಾಕೆಟ್ ಮತ್ತು ಮಂದಸ್ಮಿತೆಯಂತೆ ಬಳುಕುತ್ತಾ ಧರೆಗಿಳಿಯುವ ರಾಣಿ.

ಮಳೆಗಾಲದಲ್ಲಂತೂ ಅಗಾಧ ಜಲರಾಶಿ ಅಷ್ಟೊಂದು ಎತ್ತರದಿಂದ ಧುಮ್ಮಿಕ್ಕುವಾಗ ಮೋಡವೇ ನೆಲಕ್ಕೆ ಇಳಿಯುತ್ತಿದೆಯೇನೋ ಎನ್ನುವಂತೆ ಭಾಸವಾಗುತ್ತದೆ. ಬಲವಾಗಿ ಬೀಸುವ ಗಾಳಿಗೆ ಹಾಲನೊರೆ ಚಿಮ್ಮಿಸುತ್ತಾ ದೇವಕನ್ಯೆಯರು ನರ್ತನ ಮಾಡಿದಂತೆ ಭಾಸವಾಗುತ್ತದೆ. ಎಷ್ಟು ಹೊತ್ತು ನಿಂತರೂ ಇನ್ನಷ್ಟು ಕಣ್ಣುತುಂಬಿಕೊಳ್ಳಬೇಕು ಎನ್ನುವ ಸೌಂದರ್ಯ ರಾಶಿ. ಅಬ್ಬಾ ಜೀವನ ಸಾರ್ಥಕವಾಯಿತು ಎಂಬ ಉದ್ಗಾರ ನಮಗೇ ಅರಿವಿಲ್ಲದಂತೆ ಹೊರಬೀಳುತ್ತದೆ.

## ಲಿಂಗನಮಕ್ಕಿಯ ದಿಗ್ಬಂಧನ

ತೀರ್ಥಹಳ್ಳಿ ತಾಲ್ಲೂಕಿನ ಪಶ್ಚಿಮಘಟ್ಟ ಪ್ರದೇಶದ ನಿತ್ಯ ಹರಿದ್ವರ್ಣದ ಕಾಡಿನ ಮಧ್ಯೆ ಇರುವ ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿ ನದಿ ಉತ್ತರ–ಪಶ್ಚಿಮಾಭಿ ಮುಖವಾಗಿ ಹರಿಯುತ್ತಾಳೆ. ಜಲವಿದ್ಯುತ್ ಉತ್ಪಾದನೆಗಾಗಿ ಈ ನದಿಗೆ ಲಿಂಗನಮಕ್ಕಿ ಬಳಿ ಬೃಹತ್ ಅಣೆಕಟ್ಟೆ ನಿರ್ಮಿಸಲಾಗಿದೆ. ಅಲ್ಲಿನ ಹೆಚ್ಚುವರಿ ನೀರು ಕಾರ್ಗಲ್ ಅಣೆಕಟ್ಟೆ ಸೇರುತ್ತದೆ. ಕಾರ್ಗಲ್ ಅಣೆಕಟ್ಟೆ ತುಂಬಿ ಹರಿಯುವ ನೀರು ಮುಂದೆ ಸಾಗಿ ಜಲಪಾತ ಸೃಷ್ಟಿಸುತ್ತದೆ.